**ವಿಧಾನ ಪರಿಷತ್ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ರವರು ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ: ಕಲಬುರಗಿ ಜಿಲ್ಲೆಯ ಕೋಟನೂರು (ಡಿ) ಗ್ರಾಮದ ಲುಂಬಿಣಿ ಉದ್ಯಾನವನದಲ್ಲಿ ಡಾ॥ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಕಿಡಿಗೇಡಿಗಳು ಅಪಮಾನ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದ್ದು, ರಾಜ್ಯದಲ್ಲಿ ಈ ತರನಾದ ಪ್ರಕರಣಗಳು ಪದೇ ಪದೇ ಮರುಕಳಿಸುತ್ತಿರುವುದು ಅತ್ಯಂತ ಬೇಸರದ ಸಂಗತಿಯಾಗಿದೆ. ದೇಶಕ್ಕೆ ಸಂವಿಧಾನ ಕೊಟ್ಟ ಜ್ಞಾನಿಗೆ ಕೆಲವು ಅಜ್ಞಾನಿಗಳು ಅವಮಾನ ಮಾಡಿದ್ದಾರೆ. ಅವರ ಮೂಲ ಆದರ್ಶಗಳನ್ನು ಸಾಕ್ಷಾತ್ಕರಿಸಿ, ಅವುಗಳನ್ನು ವಿಸ್ತರಿಸುವುದು ಮಾನವ ಸಮಾಜಕ್ಕೆ ಹೇಗೆ ಉಪಯುಕ್ತವಾದೀತು ಎಂಬುದನ್ನು ಕುರಿತು ಚರ್ಚಿಸುವುದು ಅಗತ್ಯವಾಗಿದೆ. ಸದರಿ ಘಟನೆಯು ಅಕ್ಷಮ್ಯ ಅಪರಾಧವಾಗಿದ್ದು, ದುಷ್ಕರ್ಮಿಗಳನ್ನು ಬಂಧಿಸಿ, ಶಿಕ್ಷೆಗೆ ಗುರಿಪಡಿಸಬೇಕು. ಅಂಬೇಡ್ಕರ್‌ರವರ ಪ್ರತಿಮೆಗೆ ಅಪಮಾನ ಮಾಡಿ, ಸಮಾಜದ ಸ್ವಾಸ್ಥ್ಯ ಕೆಡಿಸಿ, ಅರಾಜಕತೆ ಸೃಷ್ಟಿಸುತ್ತಿರುವುದು ದುರದೃಷ್ಟಕರ. ಪ್ರತಿಮೆಗೆ ಅಪಮಾನ ಮಾಡುವ ಕಿಡಿಗೇಡಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು ಹಾಗೂ ಅಪಮಾನ ಮಾಡಿರುವ ದುಷ್ಕರ್ಮಿಗಳನ್ನು ಗಡಿಪಾರು ಮಾಡಬೇಕು. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕ್ರಮಕೈಗೊಳ್ಳಬೇಕು. ಇಂತಹ ಘಟನೆಗಳು ಹಿಂದೆ ಕಾಣದ ಕೈಗಳು ಕೆಲಸ ಮಾಡುತ್ತಿದ್ದು, ಅಂತವರನ್ನು ಪತ್ತೆ ಹಚ್ಚಿ ಕಾನೂನು ರೀತ್ಯಾ ಶಿಕ್ಷಿಸುವ ಕೆಲಸ ಆಗಬೇಕೆಂಬುದರ ಬಗ್ಗೆ.**

**ಉತ್ತರ:** ದಿನಾಂಕ:23.01.2024 ರಂದು ರಾತ್ರಿ ಅವಧಿಯಲ್ಲಿ ಕಲಬುರಗಿ ನಗರದ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಕೋಟನೂರ (ಡಿ) ಪ್ರದೇಶದ ಜೇವರ್ಗಿ ರೋಡ್‌ಗೆ ಹೊಂದಿಕೊಂಡಂತೆ ಇರುವ ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರವರ ಮೂರ್ತಿಗೆ ಯಾರೋ ಕಿಡಿಗೇಡಿಗಳು ಚಪ್ಪಲಿ ಹಾರವನ್ನು ಹಾಕಿ ಅಪಮಾನ ಮಾಡಿರುವ ಬಗ್ಗೆ ಶ್ರೀ ದಿನೇಶ ನಾಗೇಂದ್ರಪ್ಪ ದೊಡಮನಿ ಸಾ॥ ಕೋಟನೂರ (ಡಿ) ರವರು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನ ಮೇರೆಗೆ ದಿನಾಂಕ:23.01.2024 ರಂದು ಪ್ರಕರಣ ಸಂಖ್ಯೆ 18/2024 ಕಲಂ 295 ಐಪಿಸಿ & 3(1)(ಯು), 3(ವಿ), 3(ಟಿ) ಎಸ್‌ಸಿ/ಎಸ್‌ಟಿ (ಪಿ.ಎ)ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರಕರಣದ ಮುಂದಿನ ತನಿಖೆಯನ್ನು ಸಹಾಯಕ ಪೊಲೀಸ್ ಆಯುಕ್ತರು, ಸಬ್ ಅರ್ಬನ್ ಉಪ–ವಿಭಾಗ, ಕಲಬುರಗಿ ನಗರ ರವರಿಗೆ ವಹಿಸಿದ್ದು, ಪ್ರಕರಣದಲ್ಲಿ ಆರೋಪಿತರಾದ (ಎ–1) ಸಂಗಮೇಶ ತಂದೆ ಸುಭಾಷ್ ಮಾಳಿ ಪಾಟೀಲ್, 38 ವರ್ಷ, (ಎ–2) ಕಿರಣ ತಂದೆ ಪ್ರಭುರಾಜ, 26 ವರ್ಷ, (ಎ–3) ಹಣಮಂತ ತಂದೆ ಚಂದ್ರಕಾಂತ ಪೂಜಾರಿ, 25 ವರ್ಷ, (ಎ–4) ಮಾನು ತಂದೆ ಗಂಗಾರಾಮ ರಾಠೋಡ, 31 ವರ್ಷ ಇವರನ್ನು ದಿನಾಂಕ:24.01.2024 ರಂದು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದು, ತಲೆಮರೆಸಿಕೊಂಡಿದ್ದ (ಎ–5) ಪ್ರಶಾಂತ ತಂದೆ ಗುಂಡಪ್ಪ ಮಾಲಿ ಪಾಟೀಲ್, 33 ವರ್ಷ ಈತನನ್ನು ಸಹ ದಿನಾಂಕ 26.01.2024 ರಂದು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿರುತ್ತದೆ. ಸದರಿ ಪ್ರಕರಣವು ಪ್ರಸ್ತುತ ತನಿಖಾ ಹಂತದಲ್ಲಿರುತ್ತದೆ. ಈ ಪ್ರಕರಣದಲ್ಲಿ ಎಲ್ಲಾ ಆಯಾಮಗಳಲ್ಲಿ ತನಿಖೆಯನ್ನು ಸಂಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಶೀಘ್ರವಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗುವುದು.

---

ಹೆಚ್‌ಡಿ 49 ಎಸ್‌ಎಸ್‌ಟಿ 2024

ಪರಮೇಶ್ವರ

**(ಡಾ॥ ಜಿ.ಪರಮೇಶ್ವರ)**
**ಗೃಹ ಸಚಿವರು**